

ಬುಡುಬುಡುಕೆ ಅಲ್ಲಾಡಿಸಿ, ಕ್ಷಣ ಕಣ್ಣು ಮುಚ್ಚಿ ತೆರೆದು, ದೇವಮೂಲೆಯ ಕಡೆಗೊಮ್ಮೆ ಕಣ್ಣು ಅಗಲ ಮಾಡಿ ನೋಡಿ, ''ಆಹಾ ಅಮ್ಮಯ್ಯ ಮುದ್ದನುಮಕ್ಕ ಇಬ್ಬರ ಹೆಸರು ಬಲ ಮಾತ್ರ ಬಲು ಹೈಕ್ಲಾಸಾಗೈತಮ್ಮ. ಗಂಡ ಹೆಂಡತಿ ಒಳ್ಳೆ ನಳ ದಮಯಂತಿ ಥರನೋ ಇಲ್ಲ ಹರಿಶ್ಚಂದ್ರ ಚಂದ್ರಮತಿ ಥರನೋ ಇರ್ತಾರೆ ಅಂತ ಗ್ರಹಗತಿಗಳು ಹೇಳ್ತಾ ಅವೆ. ಅಕಸ್ಮಾತ್ ಒಂದ್ವೇಳೆ ಗ್ರಹಗತಿಗಳು ಕೆಟ್ರೆ ಈ ರಾಮಯ್ಯ ಸುಮ್ನೆ ಇರ್ತಾನೇನಮ್ಮ. ಗ್ರಹಗತಿಗಳ ಗ್ರಹಚಾರನೇ ಬಿಡಿಸಲ್ವೇನಮ್ಮ. ಅದರ ಚಿಂತೆ ಬಿಟ್ಟು ಒಂದೆರಡು ಕೆಜಿ ಬೆಲ್ಲ ನನ್ನ ಜೋಳಿಗೆಗೆ ಹಾಕು.'' ಎಂದು ಬೆಲ್ಲವನ್ನು ಹಾಕಿಸಿಕೊಂಡು ಪಕ್ಕದ ಮನೆಯ ಕಡೆ ನಡೆದಿದ್ದ. ಬುಡುಬುಡುಕೆ ರಾಮಯ್ಯನ ಮಾತುಗಳನ್ನು ಕಿವಿಗೆ ತುಂಬಿಕೊಂಡ ತಂಗ್ಯನು ಮುಂಬರುವ ಸಂಭ್ರಮದ ಕ್ಷಣಗಳಿಗೆ ಎದೆ ತೆರೆದಿಟ್ಟು ತೆನೆ ಕಿತ್ತುಕೊಳ್ಳುತ್ತಿದ್ದ ರಾಗಿ ಪೈರಿಗೆ ನೀರು ಕಟ್ಟಲು ಲಗುಬಗೆಯಿಂದ ಹೊಲದ ಕಡೆ ಹೊರಟ. ಮುದ್ದನುಮಕ್ಕ ಹುಡುಗಿಯ ವಯಸ್ಸಿನ ಬಗ್ಗೆ ತಮಗೆ ತಕರಾರಿಲ್ಲವೆಂದು, ತಾವು ಹುಡುಗಿಯನ್ನು ನೋಡಲು ಬರುವುದಾಗಿ ಹುಡುಗಿಯ ಮನೆಯವರಿಗೆ ತಿಳಿಸಲು ಕುಂಟ್ಕಾಲ್ ದೊಡ್ಡಯ್ಯನಿಗೆ ತಿಳಿಸಿದಳು. ಕೂಡಲೇ ದೊಡ್ಡಯ್ಯನು ಬಣ್ಣ, ಬಟನ್ ಎರಡೂ ಸವೆದು ಹೋಗಿದ್ದ ಮೊಬೈಲ್ ಫೋನನ್ನು ಅಂಗಿ ಜೇಬಿನಿಂದ ಜೋಪಾನವಾಗಿ ತೆಗೆದು ನಂಬರ್ ಒತ್ತಿ ಸಮಾಚಾರವನ್ನು ರವಾನೆ ಮಾಡಲು ಆ ಕಡೆಯಿಂದ, ''ಹೆಣ್ಣು ನೋಡಲು ನೀವು ಯಾವತ್ತಾದ್ರೂ ಬರ್ರಿ, ಒಂದಿನ ಮುಂಚಿತವಾಗಿ ಸುದ್ದಿ ಕೊಡ್ರಿ.'' ಎಂದು ಹೆಣ್ಣಿನ ತಂದೆ ಕೂಡಲೇ ಸಂತಸವನ್ನು ವ್ಯಕ್ತಪಡಿಸಿದ್ದ.

ಶುಭ ಕಾರ್ಯಕ್ಕೆ ತಡಮಾಡೋದು ತರವಲ್ಲ ಎಂದು ದೊಡ್ಡಯ್ಯನು ಹೆಣ್ಣಿನ ಮನೆಗೆ ಹೋಗುವ